**ಅಸಲು ದಾವಾ ಸಂ.30/2010**

ಡಿ .ಡಬ್ಲ್ಯೂ-1

ದಿನಾಂಕ 28-06-2024 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀಸವಾಲುಃಪ್ರತಿವಾದಿ ನಂ 1 ಪರ ಶ್ರೀ ಎ ವಿ ಬಿ ವಕೀಲರಿಂದಃ-**

ನನ್ನ ಖುದ್ದು ಊರು ಮಾಹಾರಾಷ್ಟ್ರದ ಉತ್ತೂರ ಎಂದರೆ ಸರಿ . ನನ್ನ ಆಧಾರ ಕಾರ್ಡ ಮತ್ತು ಚುನಾವಣೆ ಗುರುತಿನ ಚೀಟಿ ಯಲ್ಲಿ ಸದರಿ ಊರು ಕಾಣಿಸಿದೆ ಎಂದರೆ ಸರಿ . ಈ ದಾವೆಯನ್ನು ಸತ್ಯಬಾಮಾ ಇವರು ಮಾಡಿರುತ್ತಾರೆ . ಹೊಲದಲ್ಲಿ 05 ವರ್ಷ ಉಳುಮೆ ಮಾಡಿ ನಂತರ ಬಿಟ್ಟು ಕೊಡಲು ಹೇಳಿದ್ದರು ಅಕೆಯು ಹೊಲ ಬಿಟ್ಟು ಕೊಡದೇ ಈ ದಾವೆಯನ್ನು ಹುಡಿರುತ್ತಾಳೆ . ಹೊಲ ಸರ್ವೆ ನಂಬರ ನನಗೆ ಹೇಳಲು ಬರುವದಿಲ್ಲ .

ನನ್ನ ತಂದೆಗೆ 05 ಜನ ಮಕ್ಕಳು ಇದ್ದು ಅವರು ರಾಮಪ್ಪ , ಸಿದ್ದರಾಮಪ್ಪ , ಲಕ್ಷ್ಮಣ , ಮೋತಿರಾಮ , ಸಣ್ಣ ಲಕ್ಷ್ಮಣ ಇರುತ್ತಾರೆ . ಮೋತಿರಾಮ ಇವರು ಸತ್ಯಬಾಮಾ ಇವರ ಗಂಡ ಇರುತ್ತಾನೆ ಎಂದರೆ ಸರಿ . ದಾವಾ ಹೊಲ ಯರಗಟ್ಟಿ ಗ್ರಾಮದಲ್ಲಿ ಇದೆ . ಅದು 08 ಎಕರೆ ಇರುತ್ತದೆ . ಅದರಲ್ಲಿ 5 ಪಾಲುಗಳು ಇರುತ್ತವೆ . ಸದರಿ 08 ಎಕರೆಯಲ್ಲಿ ಲಕ್ಷ್ಮಣ ಇವರಿಗೆ 01 ಎಕರೆ 15 ಗುಂಟೆ , ಮೋತಿರಾಮ ಇವರಿಗೆ 01 ಎಕರೆ 15 ಗುಂಟೆ , ಲಕ್ಷ್ಮಣ ಇವರಿಗೆ 01 ಎಕರೆ 10 ಗುಂಟೆ , ರಾಮಪ್ಪ ಇವರಿಗೆ 02 ಎಕರೆ , ಸಿದ್ದರಾಮಪ್ಪ ಇವರಿಗೆ 02 ಎಕರೆ ಪಾಲು ಬಂದಿರುತ್ತದೆ . ನನ್ನ ಪಾಲಿಗೆ 01 ಎಕರೆ 15 ಗುಂಟೆ ಬಂದಿರುತ್ತದೆ . ನನ್ನ ಹೊಲದ ಪಶ್ಚಿಮ ದಿಕ್ಕಿಗೆ ಮೋತಿರಾಮನ ಜಮೀನು ಇದೆ ಎಂದರೆ ಸರಿ.

ದಿನಾಂಕ 02-12-2004 ರಿಂದ 03-01-2009 ವರೆಗೆ ಸತ್ಯಬಾಮಾ ಹೊಲ ಮಾಡಿಕೊಂಡು ಒಟ್ಟು 15 ಸಾವಿರ ಹಣ ಕೊಡಬೇಕಾಗಿತ್ತು ಎಂದು ನನ್ನ ಜೊತೆ ಮಾತು ಮಾಡಿಕೊಂಡಿದ್ದರು ಎಂದರೆ ಸರಿ . ಅದರಂತೆ 15 ಸಾವಿರ ಕೊಟ್ಟು ಲಾವಣಿ ಮಾಡಿಕೊಂಡಿದ್ದಾರೆಂದರೆ ಸರಿ . ಲಾವಣಿ ಮಾಡುವ ಕಾಲಕ್ಕೆ ಮೋತಿರಾಮ ಇವರು ಸದರಿ ಜಮೀನನ್ನು ಮಾರಾಟಮಾಡಬೇಕಾದರೆ ನನಗೆ ಹೇಳಿ ಕೇಳಿ ಮಾರಾಟ ಮಾಡಬೇಕೆಂದು ಹೇಳಿದ್ದರು ಎಂದರೆ ಸರಿಯಲ್ಲ . ಲಾವಣಿ ಮಾಡುವ ಕಾಲಕ್ಕೆ ಮೊತಿರಾಮ ಇವರು ಜಮೀನು ಮಾರಾಟ ಮಾಡಬೇಕಾದರೆ ನನಗೆ ಹೇಳಿ ಅವರು ಕೇಳಿದ ಹಣಕ್ಕೆ ನಾನು ಖರೀದಿ ತೆಗೆದುಕೊಳ್ಳುತವದಾಗಿ ಹೇಳಿದ್ದರು ಎಂದರೆ ಸರಿ .

ಸದರಿ ಹೋಲವನ್ನು 25 ವರ್ಷಗಳ ಹಿಂದೆ ನಾನು ಹಾಲಪ್ಪ ಗೋಪಾಳ ಇವರಿಗೆ ಮಾರಾಟ ಮಾಡಿರುತ್ತೇನೆ . ಆ ಕಾಲಕ್ಕೆ ಸತ್ಯಬಾಮಾ ಇವರೊಂದಿಗೆ ಮಾಡಿಕೊಂಡಿದ್ದ ಕರಾರು ಚಾಲ್ತಿ ಇತ್ತು ಎಂದರೆ ಸರಿ . ದಿನಾಂಕ 30-04-2007 ರಂದು ಹಾಲಪ್ಪನ ತಂದೆಯಾದ ಕಲ್ಲಪ್ಪ ಇವರೊಂದಿಗೆ ಆಸ್ತಿಯನ್ನು ಅವರಿಗೆ ಮಾರಾಟ ಮಾಡುದಾಗ ಒಪ್ಪಂದ ಮಾಡಿಕೊಂಡಿದ್ದೆ ಎಂದರೆ ಸರಿಯಲ್ಲ . ಕರಾರು ಪತ್ರ ಆದ ನಂತರ ಸತ್ಯಬಾಮಾ ಇವರು ನನ್ನ ಮತ್ತು ಕಲ್ಲಪ್ಪ ಇವರ ವಿರುದ್ದ ಅಸಲು ದಾವಾ ನಂಬರ 64/2007 ನ್ನು ದಾಖಲಿಸಿದ್ದರು ಎಂದರೆ ಸರಿ . ಸದರಿ ಕೇಸಿನಲ್ಲಿ ಅಕೆಯ ಪರ ಆದೇಶ ಆಯಿತು ಎಂದರೆ ಸರಿಯಲ್ಲ .ಸದರಿ

ಆದೇಶವನ್ನು ಜಮಖಂಡಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು ಆರ್ ಎ ನಂಬರ 79/2008 ರಂತೆ ದಾಖಲಾತಿಯಿತು ಎಂದರೆ ಸರಿಯಲ್ಲ . ಸದರಿ ಮೇಲ್ಮನವಿ ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ .

ನಾನು ಸತ್ಯಬಾಮಾ ಇವರನ್ನು ಹೊಲದ ಕಬ್ಜಾದಿಂದ ಬಿಡಿಸಬೇಕೆಂದು ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ನಂಬರ 30/2009 ದಾಖಲಿಸಿದ್ದೇನೆ ಎಂದರೆ ಸರಿ. ಸದರಿ ದಾವೆಯಲ್ಲಿ ಹಾಲಪ್ಪ ಕಲ್ಲಪ್ಪ ಗೋಪಾಳ ಇವರನ್ನು ಪ್ರತಿವಾದಿಯನ್ನಾಗಿ ಮಾಡಿದ್ದೆ ಎಂದರೆ ಸರಿ . ಸದರಿ ದಾವೆಯಲ್ಲಿ ಏನು ಆದೇಶವಾಗಿದೆ ಎಂದು ನನಗೆ ಹೇಳಲು ಬರುವದಿಲ್ಲ . ಸದರಿ ದಾವೆಯನ್ನು ಮರಳಿ ತೆಗೆದುಕೊಳ್ಳಲು ನಾನು ಅರ್ಜಿಯನ್ನು ಹಾಕಿರುವದಿಲ್ಲ . ಸದರಿ ದಾವೆಯ ಅಂತಿಮ ಆದೇಶ ಏನಾಯಿತು ಎಂದು ಗೊತ್ತಿಲ್ಲ ಎಂದರೆ ಸರಿ . ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ಮಾಹಿತಿ ನನಗೆ ಗೊತ್ತಿರುವದಿಲ್ಲ . ಹಾಲಪ್ಪ ಇವರು ಈ ದಿನ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುದರಿಂದ ನಾನು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿ. ನನಗೆ ಈ ಕೇಸಿನ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ .

ಮರು ವಿಚಾರಣೆಃ- ಇಲ್ಲಾ .

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ. ದಂ., ಬನಹಟ್ಟಿ.**